# ಕ್ಷುರಸ್ಯಧಾರಾ

❑ ಸ್ವಾಮಿ ತ್ಯಾಗಾನಂದ

**ಯಾವುದೇ ಪ್ರಾಮಾಣಿಕ ಆಧ್ಯಾತ್ಮಿಕ ಸಾಧಕನು ಕಲಿಯಬಹುದಾದ ಬಹುಮುಖ್ಯ ಪಾಠಗಳನ್ನು ತುಳಸೀದಾಸರು ಹೇಳಿದ ನಾರದರ ಕಥೆಯ ಮೂಲಕ ತೋರಿಸಿಕೊಡುತ್ತಾರೆ ಸ್ವಾಮಿ ತ್ಯಾಗಾನಂದರು. ಸ್ವಾಮೀಜಿಯವರು ಆಂಗ್ಲ ಪತ್ರಿಕೆ "ವೇದಾಂತ ಕೇಸರಿ"ಯ ಸಂಪಾದಕರಾಗಿದ್ದಾಗ ಅವರು ಬರೆದ ಕೆಲವು ಸಂಪಾದಕೀಯಗಳ ಸಂಗ್ರಹವಿದು. ಇದನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಶ್ರೀಮತಿ ಶಿವಾಣಿ ಅವರು.**

**ವೇ**ದಾಂತದ ಅಭ್ಯಾಸಿಗಳಿಗೆ "ಕ್ಷುರಸ್ಯಧಾರಾ"(ಕತ್ತಿಯ ಅಲುಗು) ಎನ್ನುವ ಶಬ್ದ ಪರಿಚಿತವಾದುದು. ಸತ್ಯಸಾಕ್ಷಾತ್ಕಾರಕ್ಕೆ ಇರುವ ಮಾರ್ಗ ಎಷ್ಟು ಕಠಿಣ ಮತ್ತು ಅಪಾಯಕರವಾದುದು ಎನ್ನುವುದನ್ನು ನಚಿಕೇತನಿಗೆ ವಿವರಿಸಲು ಯಮ ಈ ರೂಪಾಲಂಕಾರವನ್ನು ಉಪಯೋಗಿಸುತ್ತಾನೆ. ನೀವು ಎದುರಿಸುವ ಪ್ರತಿಯೊಂದು ಕ್ಷಣ, ತೆಗೆದುಕೊಳ್ಳುವ ಪ್ರತಿಹೆಜ್ಜೆಯೂ ಅಪಾಯದ ಸಾಧ್ಯತೆಗಳಿಂದ ತುಂಬಿ ಹೋಗಿರುತ್ತದೆ. ಪ್ರತಿಕ್ಷಣವೂ ಎಚ್ಚರದಿಂದಿರುವ ಸಾಧಕನು ಮಾತ್ರ ಮುಂಬರುವ ಅಪಾಯಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬಲ್ಲ. ಒಬ್ಬ ಆಧ್ಯಾತ್ಮಿಕ ಸಾಧಕನು ತನ್ನ ಜೀವನದಲ್ಲಿ ಒಂದಲ್ಲ ಒಂದು ಸಮಯದಲ್ಲಿ ಎದುರಿಸುವ ಅಪಾಯಗಳ ಬಗ್ಗೆ ರಾಮಚರಿತಮಾನಸದಲ್ಲಿ ಬರುವ ನಾರದರ ಕಥೆಯಲ್ಲಿ ತುಳಸೀದಾಸರು ವಿವರಿಸಿದ್ದಾರೆ. ಆ ಕಥೆ ಅತ್ಯಂತ ಬೋಧಪ್ರದವಾಗಿದ್ದು, ಪ್ರತಿಯೊಬ್ಬ ಸತ್ಯಾನ್ವೇಷಿಯೂ ತನ್ನ ಜೀವನವನ್ನು ಅದರಲ್ಲಿ ಪ್ರತಿಬಿಂಬಿತವಾಗಿರುವುದನ್ನು ನೋಡಿಕೊಳ್ಳುವ ಕನ್ನಡಿಯಾಗಿದೆ. ಅದು ಅವನನ್ನು ಎಚ್ಚರಗೊಳಿಸುತ್ತದೆ ಮತ್ತು ಯಾವಾಗಲೂ ಜಾಗರೂಕನಾಗಿರುವಂತೆ ಎಚ್ಚರಿಸುತ್ತದೆ.

▪ **ಜ್ಞಾನಿಗಳು ಹೇಳುತ್ತಾರೆ, ಸಾಕ್ಷಾತ್ಕಾರದ ಮಾರ್ಗ ಕತ್ತಿಯ ಅಲುಗಿನ ಮೇಲೆ ನಡೆಯುವಷ್ಟು ದುರ್ಗಮವಾದುದು ಎಂದು.**

—*ಕಠೋಪನಿಷತ್, ೧.೩.೧೪* ▪

ನಾರದರ ಬಳಿ ಪ್ರಜಾಪತಿಯ ನಾಲ್ಕು ಜನ ಪುತ್ರರು ವಿದ್ಯೆ ಕಲಿಯಲು ಬಂದ ಸಮಯದಿಂದ ಕಥೆ ಪ್ರಾರಂಭವಾಗುತ್ತದೆ. ಅವರಿಂದ ತ್ಯಾಗ ಮತ್ತು ನಿರ್ವಿಕಾರತೆಯ ಬಗ್ಗೆ ತಿಳಿದುಕೊಂಡ ನಾಲ್ವರೂ ಪ್ರಪಂಚವನ್ನು ತ್ಯಜಿಸಿ ಸಂನ್ಯಾಸಿಗಳಾದರು. ನಾರದರು ಈ ರೀತಿ ಪ್ರತಿಯೊಬ್ಬರಿಗೂ ತ್ಯಾಗದ ಮಹಿಮೆಯನ್ನು ಬೋಧಿಸುತ್ತಿದ್ದರೆ ಸೃಷ್ಟಿ ಕಾರ್ಯವು ಮುಂದುವರೆಯುವ ಬಗೆ ಹೇಗೆ—ಎಂದು ಕೋಪಗೊಂಡ ಪ್ರಜಾಪತಿ, ಒಂದು ಕಡೆ ನಿಲ್ಲದೆ ಸದಾ ಚಲಿಸುತ್ತಿರುವಂತೆ ನಾರದರಿಗೆ ಶಾಪಕೊಟ್ಟ. ನಾರದರು ಒಂದು ಸ್ಥಳದಲ್ಲಿ ಹೆಚ್ಚು ಕಾಲ ನಿಂತು ಯುವಕರು ಸಂನ್ಯಾಸ-ಜೀವನವನ್ನು ಸ್ವೀಕರಿಸುವಂತೆ ಪ್ರಭಾವ ಬೀರುವುದನ್ನು ತಡೆಯುವುದು ಪ್ರಜಾಪತಿಯ ಆಲೋಚನೆಯಾಗಿತ್ತು. ಹಾಗಾಗಿ ನಮ್ಮ ಗ್ರಂಥಗಳಲ್ಲಿ, ನಾರದರು, ಭಗವಂತನ ಮಹಿಮೆಯನ್ನು ಕೊಂಡಾಡುತ್ತಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸದಾ ಪ್ರಯಾಣಮಾಡುವುದನ್ನು ನೋಡುತ್ತೇವೆ.

ಒಂದು ಸುಂದರವಾದ ದಿನ, ನಾರದರು ಹಿಮಾಲಯದಲ್ಲಿ ಹಾದುಹೋಗುತ್ತಿದ್ದರು. ಹಿಂದೆ ಅದೇ ದಾರಿಯಲ್ಲಿ ಅನೇಕ ಬಾರಿ ಸಂಚರಿಸಿದ್ದರೂ, ಈ ಬಾರಿ ಆ ಜಾಗ ಏನೋ ಬೇರೆ ರೀತಿ ಕಾಣಿಸಿತು. ಪ್ರಕೃತಿ ಸೌಂದರ್ಯ ಮರುಳುಗೊಳಿಸುವಂತಿತ್ತು. ಅಲ್ಲೇ ಹತ್ತಿರದಲ್ಲಿ ಒಂದು ಗುಹೆ, ಸಮೀಪದಲ್ಲಿ ಸುಮಧುರ ನಿನಾದದಿಂದ ಹರಿಯುತ್ತಿರುವ ಪವಿತ್ರಗಂಗೆ. ನಾರದರು ನಿಂತರು. ಗುಹೆಯ ಒಳಹೋಗಿ, ಅಲ್ಲೇ ಒಂದು ಸೂಕ್ತವಾದ ಬಂಡೆಯನ್ನು ಹತ್ತಿ ಕುಳಿತರು. ಮನಸ್ಸು ಭಗವಂತನ ನಾಮಸ್ಮರಣೆಯಿಂದ ತುಂಬಿ ಹೋಯಿತು, ಗಾಢಧ್ಯಾನದಲ್ಲಿ ಮುಳುಗಿಹೋದರು. ಇದೊಂದು ಪವಾಡವೇ ಸರಿ. ಆ ದೇವಸದೃಶ ಸೌಂದರ್ಯದ ಅಧೀನಕ್ಕೆ ಒಳಪಟ್ಟಿತೆಂಬಂತೆ ಪ್ರಜಾಪತಿಯ ಶಾಪ ತನ್ನ ಪ್ರಭಾವವನ್ನು ಕಳೆದುಕೊಂಡಿತ್ತು.

ನಾರದರು ಬಹುಶಃ ಇಂದ್ರಪದವಿಗಾಗಿ ತಪಸ್ಸು ಮಾಡಲು ಪ್ರಾರಂಭಿಸಿರಬೇಕು ಎಂದು, ದೇವತೆಗಳ ರಾಜ ಇಂದ್ರನಿಗೆ ದಿಗಿಲಾಯಿತು. ಇದು ನಮಗೆಲ್ಲ ಪರಿಚಿತವಾದ ಒಂದು ಪ್ರತಿಕ್ರಿಯೆ. ಯೋಗ್ಯತೆ ಇಲ್ಲದ ವ್ಯಕ್ತಿಗಳು ಅಧಿಕಾರದ ಸ್ಥಾನದಲ್ಲಿದ್ದರೆ, ಅವರು ಯಾವಾಗಲೂ ಅಭದ್ರತೆ ಮತ್ತು ಸಂಶಯದಿಂದ ಕೂಡಿರುತ್ತಾರೆ. ಯಾರಾದರೂ, ಎಂದಾದರೂ ತಮ್ಮನ್ನು ಸ್ಥಾನಪಲ್ಲಟ ಮಾಡಬಹುದೆಂಬ ಭಯ ಅವರನ್ನು ಸದಾ ಕಾಡುತ್ತಿರುತ್ತದೆ. ನಮ್ಮ ಪುರಾಣಗಳಲ್ಲಿ ಅನೇಕ ಸಂದರ್ಭಗಳಲ್ಲಿ ಒಬ್ಬ ಯತಿ ತಪಸ್ಸು ಮಾಡುತ್ತಿದ್ದರೆ ಎಲ್ಲಿ ಆತ ತನ್ನನ್ನು ತನ್ನ ಸ್ಥಾನದಿಂದ ಕೆಳಗಿಳಿಸುವನೋ ಎಂದು ಇಂದ್ರ ಕ್ಷೋಭೆಗೊಳ್ಳುತ್ತಿದ್ದುದನ್ನು ನೋಡುತ್ತೇವೆ.

ನಾರದರಿಗೆ ಇಂದ್ರನ ಸ್ಥಾನವನ್ನು ಪಡೆಯಬೇಕೆನ್ನುವ ಯೋಚನೆ ಸಹ ಸುಳಿದಿರಲಿಲ್ಲ. ಆ ಸ್ಥಳದ ಶಾಂತಿ, ಸೌಂದರ್ಯ ಮತ್ತು ಪವಿತ್ರತೆಯಿಂದ ಆಕರ್ಷಿತರಾಗಿ, ಸುಮ್ಮನೆ ಧ್ಯಾನಕ್ಕೆ ಕುಳಿತಿದ್ದರು ಅಷ್ಟೆ. ಇಂದ್ರನ ಹೆದರಿಕೆಗಳೆಲ್ಲಾ ಬರೀ ಕಲ್ಪನೆಗಳು. ಯಾರು ತಮ್ಮೊಳಗೆ ಅಭದ್ರತೆ ಮತ್ತು ದುರ್ಬಲತೆಯನ್ನು ಅನುಭವಿಸುತ್ತಿರುತ್ತಾರೋ ಅವರ ಮನಸ್ಸಿನಲ್ಲಿ ಕಲ್ಪನೆಗಳು ನಿಜದ ವೇಷವನ್ನು ಹಾಕಿಕೊಳ್ಳುತ್ತವೆ. ತನ್ನ ಪರಮಾಧಿಕಾರಕ್ಕೆ ವಾಸ್ತವವಾಗಿ

ಇಲ್ಲವೇ ಇರುವ ಬೆದರಿಕೆ ಇಂದ್ರನಿಗೆ ಸತ್ಯಸ್ಥಿತಿಯಾಯಿತು. ಅವನು ಪ್ರೇಮದೇವತೆ ಮನ್ಮಥನನ್ನು ಕರೆಸಿ, ನಾರದರ ಗಮನವನ್ನು ಬೇರೆಡೆಗೆ ತಿರುಗಿಸಿ ಅವರು ತಪಸ್ಸನ್ನು ಮುಂದುವರೆಸದಂತೆ ತಡೆಯಲು ಹೇಳಿದ.

ಮನ್ಮಥ ತನ್ನ ಬಿಲ್ಲು, ಪ್ರೇಮ-ಬಾಣ ಮತ್ತು ಅಪ್ಸರೆಯ ರೊಂದಿಗೆ ಹೊರಟ. ನಾರದರ ತಪಸ್ಸಿನ ಸ್ಥಳಕ್ಕೆ ಬರುತ್ತಿದ್ದಂತೆಯೇ ಅಲ್ಲಿರುವ ಯಾವುದೇ ಜೀವಿಗೆ ಕೂಡ ಪ್ರೇಮಜ್ವರ ಬರುವಂತಹ ವಾತಾವರಣವನ್ನುಂಟುಮಾಡಿದ್ದೇ ಮನ್ಮಥ ಮಾಡಿದ ಮೊದಲ ಕೆಲಸ. ನಂತರ ಅವನೂ ಅವನ ಗುಂಪಿನವರೂ ಸೇರಿ ನಾರದರ ಮನಸ್ಸನ್ನು ಕೆಳಗೆಳೆಯುವ ಎಲ್ಲಾ ತಂತ್ರೋಪಾಯಗಳನ್ನೂ ಪ್ರಯೋಗಿಸಿದರು. ನಾರದರ ಸುತ್ತ ಮುತ್ತ ನೃತ್ಯ, ಸಂಗೀತ, ಲೌಕಿಕ ಮಾತು ಮುಂದುವರೆಯಿತು. ಮನ್ಮಥ ಒಂದಾದ ಮೇಲೊಂದು ಪ್ರೇಮ-ಬಾಣ ಪ್ರಯೋಗ ಮಾಡಿದ. ಆದರೆ ನಾರದರ ಸಮಾಧಿ ಭಂಗವಾಗಲೇ ಇಲ್ಲ. ಮನ್ಮಥ ಮೂಕವಿಸ್ಮಿತನಾದ. ಸಾಮಾನ್ಯರು ಅವನ ಒಂದು ಬಾಣಕ್ಕೇ ಬಲಿಯಾಗುವರು. ಆದರೆ ಇಲ್ಲಿ, ಅವನ ಬಾಣಗಳ ಸುರಿಮಳೆಯೇ ಆದರೂ ನಾರದರಿಗೆ ಅದರ ಪರಿಜ್ಞಾನವೇ ಇಲ್ಲ. ಯುದ್ಧ ಸಾಮಗ್ರಿಗಳು ಖಾಲಿಯಾದುವು, ನಾರದರ ತಪಸ್ಸನ್ನು ಭಂಗಗೊಳಿಸುವ ಶಕ್ತಿ ತನ್ನ ಸಾಮರ್ಥ್ಯವನ್ನು ಮೀರಿದ್ದು ಎಂದು ಅರಿವಾದೊಡನೆ ಪೂಜ್ಯ ನಾರದರು ಶಾಪಕೊಟ್ಟರೆ ತನ್ನ ಗತಿ ಏನು ಎಂದು ಮನ್ಮಥನಿಗೆ ಹೆದರಿಕೆಯಾಯಿತು. ತನ್ನನ್ನು ಸಂಪೂರ್ಣ ನಾಶ ಮಾಡಿದರೆ ಏನು ಮಾಡುವುದು? ಹೆದರಿಕೆಯಿಂದ ನಡುಗುತ್ತಾ ನಾರದರ ಬಳಿ ಬಂದು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ಎಲ್ಲ ನೃತ್ಯಗಾತಿಯರೂ, ಅಪ್ಸರೆಯರೂ ನಾರದರ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿದರು.

"ನೀವು ಮಾಡಿದ ಕೆಲಸ ನನ್ನ ಮನನೋಯಿಸಿಲ್ಲ" ಎಂದು ಹೇಳಿ ನಾರದರು ಅವರನ್ನೆಲ್ಲಾ ಅಂತಃಕರಣಪೂರ್ವಕವಾಗಿ ಆಶೀರ್ವದಿಸಿದರು. ನಾರದರ ಉದಾರತೆಯಿಂದ ಸಮಾಧಾನ ಗೊಂಡು ಅವರೆಲ್ಲಾ ಆದಷ್ಟುಬೇಗ ಅಲ್ಲಿಂದ ಇಂದ್ರನ ಅರಮನೆಗೆ ಹೋಗಿ ಇಲ್ಲಿ ಆದದ್ದನ್ನೆಲ್ಲಾ ಪೂರ್ತಿಯಾಗಿ ಇಂದ್ರನಿಗೆ ವರದಿ ಮಾಡಿದರು. ಅಲ್ಲಿದ್ದವರೆಲ್ಲಾ ನಾರದರು ಕಾಮ-ಕ್ರೋಧವನ್ನು ಜಯಿಸಿರುವುದಕ್ಕೆ, ಶ್ರೀಹರಿಯ ಪಾದಪದ್ಮಗಳಲ್ಲಿ ಅವರಿಗಿರುವ ಭಕ್ತಿಯೇ ಕಾರಣ ಎಂಬ ಅಭಿಪ್ರಾಯಕ್ಕೆ ಬಂದರು. ತನ್ನ ಪ್ರೀತಿಯ ಭಕ್ತ ಕಾಮ-ಕ್ರೋಧಗಳಿಗೆ ಬಲಿಯಾಗದಂತೆ ರಕ್ಷಿಸಿರುವುದು ಭಗವಂತನೇ ಎಂದು ಎಲ್ಲರೂ ಅಭಿಪ್ರಾಯಪಟ್ಟರು. ನಾರದರ ಉದಾಹರಣೆಯನ್ನು ತಮ್ಮ ಮುಂದಿಟ್ಟುಕೊಂಡು ಎಲ್ಲರೂ ಶ್ರೀಹರಿಯ ಮೇಲಿನ ತಮ್ಮ ಭಕ್ತಿಯನ್ನು ಇನ್ನೂ ತೀವ್ರಗೊಳಿಸಿದರು.

ಇಲ್ಲಿಯವರೆಗೆ ಎಲ್ಲಾ ಒಳ್ಳೆಯದಾಯಿತು. ಆದರೆ, ಸ್ವಲ್ಪ ನಾರದರ ಬಳಿ ಹೋಗೋಣ. ನಾರದರ ಮನಸ್ಥಿತಿ ಈಗ ಹೇಗಿದೆ? ಮನ್ಮಥ ಮತ್ತು ಆತನ ಪರಿವಾರ ಹೋದನಂತರ ಮೊದಲ ಬಾರಿಗೆ ಏನೋ ಒಂದು ವಿಶೇಷ ನಡೆದಿದೆ ಎಂದು ನಾರದರಿಗೆ ಮನವರಿಕೆ ಯಾಯಿತು. ಮೊದಲನೆಯದಾಗಿ, ಪ್ರಜಾಪತಿಯ ಶಾಪವಿದ್ದೂ ಕೂಡ ಒಂದು ಸ್ಥಳದಲ್ಲಿ ಅಷ್ಟು ದೀರ್ಘಕಾಲ ಕುಳಿತು ಗಾಢ ಸಮಾಧಿಯಲ್ಲಿ ಮುಳುಗಿಹೋದದ್ದು. ಎರಡನೆಯದಾಗಿ ಮನ್ಮಥ ಮತ್ತು ಆತನ ಪರಿವಾರದವರು ತಮ್ಮನ್ನು ಧ್ಯಾನದಿಂದ ವಿಮುಖ ರಾಗುವಂತೆ ಮಾಡಿದ ಎಲ್ಲಾ ರೀತಿಯ ಪ್ರಯತ್ನಗಳೂ ವಿಫಲ ವಾದದ್ದು. ಇದಲ್ಲದೆ, ಮನ್ಮಥ ಮತ್ತು ಆತನ ಪರಿವಾರ ತನ್ನನ್ನು ತಪ್ಪು ದಾರಿಗೆ ಎಳೆಯಲು ನೋಡಿದರೂ ಅವರ ಮೇಲೆ ಸ್ವಲ್ಪವೂ ಸಿಟ್ಟು ಬಾರದಿದ್ದುದರಿಂದ ತಾನು ಮತ್ತೊಂದು ಶತ್ರುವಾದ ಕ್ರೋಧವನ್ನೂ ಜಯಿಸಿದ್ದೇನೆ ಮತ್ತು ವಶಪಡಿಸಿಕೊಂಡಿದ್ದೇನೆ ಎಂದು ನಾರದರಿಗೆ ಮನವರಿಕೆಯಾಯಿತು.

ನಂತರ ಬಂತು ಒಂದು ಅಪಾಯಕರವಾದ ತೀರ್ಮಾನ. ನಾರದ ರಿಗನ್ನಿಸಿತು, ಇದೊಂದು ಅದ್ವಿತೀಯವಾದ ಸಾಧನೆ, ಅದು ತನ್ನದೇ ಸಾಧನೆ ಎಂದು. ಎಂಥ ವಿಧಿಯ ವಿಪರ್ಯಾಸ! ದೇವದೇವತೆಯರು "ಭಗವಂತ ತನ್ನ ಭಕ್ತನನ್ನು ರಕ್ಷಿಸಿದ ರೀತಿಯನ್ನು ಶ್ರೀಹರಿಯದೇ ಜಯ" ಎಂದು ಆಚರಿಸುತ್ತಾ, ನಾರದರ ಮೇಲ್ಪಂಕ್ತಿಯನ್ನು ಅನು ಸರಿಸಲು ಪ್ರಯತ್ನಿಸುತ್ತಿದ್ದರೆ, ಇತ್ತಕಡೆ ನಾರದರು ಅದು ತಮ್ಮದೇ ಜಯ ಎಂದು ಹೆಮ್ಮೆ ಪಡುತ್ತಿದ್ದಾರೆ! ನಾರದರು ಎಷ್ಟು ಉಬ್ಬಿ ಹೋಗಿದ್ದರೆಂದರೆ, ಸದಾಕಾಲ ಭಗವಂತನ ನಾಮಸ್ಮರಣೆ ಮಾಡು ತ್ತಿದ್ದ ಅಭ್ಯಾಸ ನಿಂತುಹೋಗಿರುವುದನ್ನು ಸಹ ಗಮನಿಸಲಿಲ್ಲ. ತಮ್ಮ ಕೀರ್ತಿಯಲ್ಲಿ ತಾವೇ ಮುಳುಗಿ ಹೋಗಿದ್ದರು. ಯಾವಾಗ ಅಹಂ ಭಾವ ಹೆಡೆಯೆತ್ತುವುದೋ ಬೇರೆ ಎಲ್ಲ ಮರೆಯಾಗುತ್ತದೆ.

> ಆಧ್ಯಾತ್ಮಿಕ ಜೀವನದಲ್ಲಿ ಸರಿಯಾದ ತರಬೇತಿ ಇದ್ದರೆ ಯಾವ ಭಯವೂ ಇಲ್ಲ. ಆಗ ಕತ್ತಿಯ ಅಲುಗಿನ ಮೇಲೆ ನಡೆಯುವುದು ಒಂದು ಮೋಜೆನಿಸುತ್ತದೆ.
>
> —*ಸ್ವಾಮಿ ಯತೀಶ್ವರಾನಂದ*

ಪಾಪ ನಾರದರು! ಅವರಿಗೆ "ಕತ್ತಿಯ ಅಲಗು" ಎದುರಾ ಯಿತು. ಎಲ್ಲಿಯವರೆಗೆ ನೀವು ಭಗವಂತನನ್ನು ಹಿಡಿದುಕೊಂಡಿ ರುತ್ತೀರೋ, ಎಲ್ಲಿಯವರಗೆ ನಿಮ್ಮ ಎಲ್ಲ ಮಾತು, ಕೃತಿ ಮತ್ತು ಆಲೋಚನೆಗಳಲ್ಲಿ ಭಗ ವಂತನ ಇರುವಿಕೆಯನ್ನು ಒಪ್ಪಿಕೊಳ್ಳುತ್ತೀರೋ, ನೀವು ತುಳಿಯುವ ಹಾದಿ ವಿಶಾಲವಾಗಿಯೂ, ಮೃದುವಾಗಿಯೂ, ಸುಲಭವಾಗಿಯೂ ಇರುತ್ತದೆ. ಒಂದು ಸಲ ನೀವು ಆ ಹಿಡಿತವನ್ನು ಬಿಟ್ಟುಬಿಡು ತ್ತೀರೋ, ನಿಮ್ಮ ಮಾತು, ಕೃತಿ ಮತ್ತು ಆಲೋಚನೆಗಳಲ್ಲಿ ಭಗವಂತನನ್ನು ಒಪ್ಪಿಕೊಳ್ಳುವುದಿಲ್ಲವೋ, ಆಗ ದಾರಿ ಕಿರಿದೂ ದುರ್ಗಮವೂ ಕಷ್ಟಕರವೂ ಆಗುತ್ತದೆ. ಹೆಚ್ಚು ದೂರ ಈ ದಾರಿ ಯಲ್ಲಿ ಮುಂದುವರೆದಂತೆ ದಾರಿ ಅತ್ಯಂತ ಕಿರಿದಾಗುತ್ತಾ ಬಂದು ಕೊನೆಗೆ "ಕತ್ತಿಯ ಅಲಗಿ"ನಂತಾಗುತ್ತದೆ. ನಾರದರು ಈಗ ಕತ್ತಿಯ ಅಲಗಿನ ಮೇಲೆ ನಡೆಯುತ್ತಿದ್ದಾರೆ. ಇನ್ನೂ ಹೆಚ್ಚಿನ ದುರ ದೃಷ್ಟವೆಂದರೆ ಅದರ ಅರಿವು ಕೂಡ ಅವರಿಗಿಲ್ಲ.

ನಿಜವಾಗಿ ನಾರದರು ಏನನ್ನು ಸಾಧಿಸಿದರು—ಎಂದು ಯೋಚಿ ಸಿದರೆ ತಿಳಿಯುತ್ತದೆ ಅದು ಅಂಥಾ ಚಮತ್ಕಾರವಾದುದೇನೂ

ಅಲ್ಲವೆಂದು. ಸ್ವಲ್ಪ ಕಾಲ ಕಾಮ ಮತ್ತು ಕ್ರೋಧವನ್ನು ತಡೆಹಿಡಿದಿದ್ದವರು ಅಷ್ಟೇ. ಅದು ಅಂಥ ವಿಶೇಷವಾದುದೇನೂ ಅಲ್ಲ. ಎಷ್ಟೋ ಬಾರಿ ಅತ್ಯಂತ ಪ್ರಾಪಂಚಿಕ ಮನುಷ್ಯನನ್ನೂ ಸಹ ಕಾಮಾದಿಗಳು ಕೆಣಕಿ ಭಾವೋದ್ರೇಕಗೊಳಿಸಲು ಸಾಧ್ಯವಿಲ್ಲ. ಅವನಿಗೂ ಕೆಲವು ಸಂತೃಪ್ತಿಯ ಕ್ಷಣಗಳಿರುತ್ತವೆ. ಯಾವುದೇ ಕೆಟ್ಟ ಮನುಷ್ಯ ದಿನದ ಇಪ್ಪತ್ನಾಲ್ಕು ಘಂಟೆಗಳೂ ಕೆಟ್ಟವನಾಗಿಯೇ ಇರುವುದಿಲ್ಲ. ಯಾವ ಮೋಸಗಾರನೂ ತನ್ನ ಜೀವನದ ಪ್ರತಿ ಕ್ಷಣವನ್ನೂ ಮೋಸ ಮಾಡುತ್ತಲೇ ಕಳೆಯುವುದಿಲ್ಲ. ಆದುದರಿಂದ ನಾರದರ ಜಯ ಅಂಥ ವಿಶೇಷವಾದುದೇನೂ ಅಲ್ಲ. ಇದೆಲ್ಲಕ್ಕಿಂತ ಶ್ರೀಹರಿಯಿಂದ ರಕ್ಷಿಸಲ್ಪಟ್ಟ ಪ್ರೀತಿಯ ಭಕ್ತನಾಗಿ, ಇಂತಹ ಒಂದು ಸಹಜವಾದ ಘಟನೆಗೆ ಅಷ್ಟೊಂದು ಉಬ್ಬಿಹೋಗುವಂಥದ್ದು ಏನೂ ಇರಲಿಲ್ಲ. ಆದರೆ ಮೊದಲೇ ಹೇಳಿದಂತೆ, ಅಹಂಭಾವ ಎಲ್ಲವನ್ನೂ ಮರೆಮಾಡುತ್ತದೆ. ಅಹಂಭಾವ ಮೋಡಿಮಾಡಿದಾಗ, ಸರಿ ತಪ್ಪಾಗಿ ಕಾಣುತ್ತದೆ, ತಪ್ಪು ಸರಿಯಾಗಿ ಕಾಣುತ್ತದೆ, ಸಾಧಾರಣ ವಸ್ತು ಅಸಾಧಾರಣವಾಗಿ ಕಾಣುತ್ತದೆ.

ಯಾವ ಆಧ್ಯಾತ್ಮಿಕ ಸಾಧಕನೂ ತನ್ನ ಕ್ಷಣಿಕ ಯಶಸ್ಸನ್ನು ಶಾಶ್ವತವಾದ ಸಾಧನೆಯೆಂದು ತಪ್ಪು ತಿಳಿಯಬಾರದು. ಅದರಲ್ಲೂ ಕಾಮ-ಕ್ರೋಧಗಳಿಗೆ ಸಂಬಂಧಿಸಿದಂತೆ, ಯಾವ ಸಾಧಕನೂ ತಾನು ಸುರಕ್ಷಿತ ಎಂದು ತಿಳಿಯಲು ಸಾಧ್ಯವಿಲ್ಲ. ಒಮ್ಮೆ ಒಬ್ಬರು ಸಾಧುಗಳನ್ನು, "ಪೂಜ್ಯರೇ, ಕಾಮ-ಕ್ರೋಧಗಳಿಂದ ಮುಕ್ತವಾದ ಪವಿತ್ರ ಜೀವನ ತಮ್ಮದಾಗಿದೆಯೆ?" ಎಂದು ಪ್ರಶ್ನೆ ಕೇಳಲಾಯಿತು. ಸಾಧುಗಳು ಈ ಪ್ರಶ್ನೆಗೆ ಉತ್ತರವನ್ನು ನಂತರ ಹೇಳುತ್ತೇನೆ ಎಂದು ಹೇಳಿದರು. ಎಷ್ಟೋ ವರ್ಷಗಳ ನಂತರ ಅವರ ಅಂತ್ಯಕಾಲ ಸಮೀಪಿಸಿದಾಗ, ಅವರು ಪ್ರಶ್ನೆ ಕೇಳಿದಾತನನ್ನು ಕರೆದು ಹೀಗೆ ಹೇಳಿದರು, "ನನ್ನ ಗೆಳೆಯ, ನಾನೀಗ ನಿನ್ನ ಪ್ರಶ್ನೆಗೆ 'ಹೌದು' ಎಂದು ಉತ್ತರ ಹೇಳುತ್ತೇನೆ" ಎಂದು.

**■ ಆಧ್ಯಾತ್ಮಿಕ ಜೀವನದಲ್ಲಿ ಒಂದು ವಿಷಯ ನೆನಪಿರಬೇಕು : ಅಹಂಕಾರ ಯುಕ್ತ ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆ ಫಲಪ್ರದವಾಗಲಾರದು.**
**—ಸ್ವಾಮಿ ಯತೀಶ್ವರಾನಂದ. ■**

"ಇಷ್ಟು ಹೇಳಲು ಇಷ್ಟೊಂದು ವರ್ಷಗಳನ್ನು ಏಕೆ ತೆಗೆದುಕೊಂಡಿರಿ?"

"ಎಲ್ಲಿಯವರೆಗೆ ಈ ದೇಹವಿರುತ್ತದೋ, ಅಲ್ಲಿಯವರೆಗೆ ವ್ಯಕ್ತಿ ತನ್ನ ಬಗ್ಗೆ ತಾನೇ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಈಗ ಈ ದೇಹವನ್ನು ಬಿಡುವ ಸಮಯದಲ್ಲಿ ನನ್ನದು ಪರಿಶುದ್ಧ ಜೀವನವಾಗಿತ್ತು, ಎಂದು ಖಂಡಿತವಾಗಿ ಹೇಳಬಲ್ಲೆ."

ಕೇವಲ ಆಧ್ಯಾತ್ಮಿಕವಾಗಿ ಜ್ಞಾನೋದಯವಾದವರಿಗೆ ಮಾತ್ರ ದೇಹಾತ್ಮಬುದ್ಧಿ ಸಂಪೂರ್ಣ ಇಲ್ಲವಾಗಿರುತ್ತದೆ. ಅವರು ಎಲ್ಲೇ ಇರಲಿ, ಯಾವುದೇ ಸಂದರ್ಭವಾಗಿರಲಿ, ಕಾಮ, ಕ್ರೋಧ ಇನ್ನಿತರ ಪ್ರಲೋಭನೆಗಳಿಂದ ಮುಕ್ತರಾಗಿರುತ್ತಾರೆ. ಉಳಿದವರು ಎಷ್ಟೇ ಮುಂಜಾಗ್ರತೆಯಿಂದಿದ್ದರೂ ಅದು ಕಡಮೆಯೇ. ಈ ಕಥೆಯಲ್ಲಿ ನಾವು ನೋಡುವ ನಾರದ ಇನ್ನೂ ಸಾಧಕ. ಒಬ್ಬ ದೊಡ್ಡ ಭಕ್ತ, ಭಗವಂತನ ಪ್ರೀತಿಪಾತ್ರ, ದೊಡ್ಡ ಸಾಧು—ಎಲ್ಲ ನಿಜ. ಆದರೆ ತಾನು ಏನನ್ನು ಸಾಧಿಸಿಲ್ಲವೋ, ಅದನ್ನು ಸಾಧಿಸಿದ್ದೇನೆ ಎಂದು ತಿಳಿಯಬಾರದಿತ್ತು. ಅದಿರಲಿ, ಈಗ ನಾವು ಅವರಲ್ಲಿಗೆ ಹೋಗಿ ಏನು ಮಾಡುತ್ತಿದ್ದಾರೆ ನೋಡೋಣ. ತಾನು ಕಾಮಕ್ರೋಧಗಳ ಮೇಲೆ ಸಂಪೂರ್ಣ ಜಯ ಸಾಧಿಸಿದ್ದೇನೆ, ಆದರೆ ಬೇರೆಯವರೆಲ್ಲ ಇದಕ್ಕೆ ದಾಸರಾಗಿದ್ದಾರೆ ಎಂದು ನಾರದರು ವಿಚಾರ ಮಾಡಿದರು. ತಾವೊಬ್ಬರು ಅಪೂರ್ವ ವ್ಯಕ್ತಿ ಮತ್ತು ಬೇರೆಯವರು ಇದರ ಬಗ್ಗೆ ಅಜ್ಞಾನದಿಂದ ಇದ್ದರೆ ಸರಿಯಲ್ಲ ಎಂದು ನಾರದರಿಗೆ ಮನದಟ್ಟಾಯಿತು. ಪ್ರತಿಯೊಬ್ಬರೆದುರಿಗೂ ತಮ್ಮ ಜಯವನ್ನು ಘೋಷಣೆ ಮಾಡಲು ಇದು ಸಕಾಲ ಎಂದು ಭಾವಿಸಿದರು.

ಮೊದಲು ಕೈಲಾಸಪತಿಯಾದ ಶಿವನ ಬಳಿ ಹೋಗಲು ನಾರದರು ನಿರ್ಧರಿಸಿದರು. ನಾರದರು ಕೈಲಾಸದ ಕಡೆ ಮುಂದುವರೆಯುತ್ತಿದ್ದಾರೆ. ಶಿವನನ್ನು ಭೇಟಿಯಾಗಲು ನಾರದರು ಏಕ ಅಷ್ಟೊಂದು ಆಸಕ್ತಿ ಹೊಂದಿದ್ದಾರೆ ಎಂದು ಊಹಿಸುವುದು ಕಷ್ಟವೇನಲ್ಲ. ನಮ್ಮ ಎಲ್ಲ ಪುಸ್ತಕಗಳಲ್ಲೂ ತ್ಯಾಗಿಗಳ ಗುರು ಎಂದು ಶಿವನನ್ನು ಕೊಂಡಾಡಿದ್ದಾರೆ. ಅವನ ತ್ಯಾಗ ಪರಮಶ್ರೇಷ್ಠವಾದುದು ಮತ್ತು ಅಪೂರ್ವವಾದುದು. ಅವನು ಮೋಹ ಮುಂತಾದ ಕಾಮವಿಕಾರಗಳನ್ನು ಗೆದ್ದವರಲ್ಲಿ ಅತ್ಯಂತ ಶ್ರೇಷ್ಠನಾದವನು. ಈಗ ನಾರದರಿಗೆ ಅವರದೇ ದೃಷ್ಟಿಕೋನದಿಂದ ತಾನೇ ಕಾಮ-ಕ್ರೋಧಗಳನ್ನು ಜಯಿಸಿದವರಲ್ಲಿ ಶ್ರೇಷ್ಠ, ತನ್ನ ಈ ವಿಜಯವನ್ನು ಕೇಳಿದಾಗ ಶಿವ ಹೇಗೆ ಪ್ರತಿಕ್ರಿಯಿಸುತ್ತಾನೆ ಎನ್ನುವುದನ್ನು ತಿಳಿಯುವ ಕುತೂಹಲ. ಶಿವನಿಗೆ ಇದರ ಬಗ್ಗೆ ಅಸೂಯೆ ಉಂಟಾಗುತ್ತದೆ ಮತ್ತು ಈ ವಿಷಯದಲ್ಲಿ ತನ್ನ ಶ್ರೇಷ್ಠತ್ವ ಕೊನೆಯಾಯಿತಲ್ಲ ಎಂಬ ದುಃಖ ಉಂಟಾಗುತ್ತದೆ ಎಂದು ಅವರಿಗೆ ಖಂಡಿತವಾಗಿ ಗೊತ್ತು.

ಶ್ರೀಹರಿಯಲ್ಲಿ ದೃಢನಿಷ್ಠೆಯುಳ್ಳ ಮುನಿವರ್ಯನನ್ನು ಸ್ವಾಗತಿಸಲು ಶಿವ ನಿಂತುಕೊಂಡಿದ್ದಾನೆ. ಶಿಷ್ಟಾಚಾರಗಳಲ್ಲಿ ಹೆಚ್ಚು ಸಮಯ ಹಾಳು ಮಾಡದೆ, ನಾರದರು ನೇರವಾಗಿ ತಾನು ಕಾಮ ಮತ್ತು ಕ್ರೋಧದ ಮೇಲೆ ಜಯ ಸಾಧಿಸಿದ ಕತೆಯನ್ನು ಹೇಳಲಾರಂಭಿಸಿದರು. ಶಿವ ಅತ್ಯಂತ ಸಹನೆಯಿಂದ ಕೇಳಿದ. ನಾರದರ ಜಂಬದ ಭಾಷಣ ನಿಂತಮೇಲೆ, ಶಿವ ಹೇಳಿದ: "ಒಳ್ಳೆಯದು, ನನ್ನ ಸ್ನೇಹಿತ, ಬಹಳ ಒಳ್ಳೆಯದು, ನೀನು ನನಗೆ ಏನು ಹೇಳಿದೆಯೋ ಅದು ನಿಜವಾಗಿ ತುಂಬ ಚೆನ್ನಾಗಿದೆ. ಆದರೆ ಇದನ್ನು ಇನ್ನು ಯಾರಿಗೂ ಹೇಳಬೇಡ. ಅದರಲ್ಲೂ ಶ್ರೀಹರಿಯ ಎದುರಿಗಂತೂ ಒಂದು ಪದ ಸಹ ಬಾಯಿಬಿಡಬೇಡ. ಅವನೇ ಈ ವಿಷಯವನ್ನು ಎತ್ತಿದರೂ, ನೀನು ಮಾತ್ರ ಬಾಯಿಬಿಡಬೇಡ."

ನಾರದರಿಗೆ ಅವರ ಕಥೆಯನ್ನು ಬೇರೆಯವರ ಎದುರಿಗೆ ಹೇಳಬೇಡ ಎಂದು ಹೇಳುವುದರ ಮೂಲಕ ಶಿವ ಪರೋಕ್ಷವಾಗಿ

ಹೇಳುತ್ತಿದ್ದಾನೆ : "ಓ, ನಾರದ, ನೀನು ಬಂದಾಗ ನಾನು ಯೋಚಿಸಿದೆ, ಎಂದಿನಂತೆ ನಿನ್ನಿಂದ ಭಗವಂತನ ಕಥೆ(ರಾಮ-ಕಥಾ)ಯನ್ನು ಕೇಳಬಹುದು ಎಂದು. ಆದರೆ, ನೀನು ಮನ್ಮಥನನ್ನು ಸಂಧಿಸಿದ ಕಥೆಯನ್ನು(ಕಾಮ-ಕಥಾ) ಹೇಳಿ ಸಾಕಷ್ಟು ಬೇಸರಪಡಿಸಿದೆ, ನನ್ನ ಸಮಯ ಹಾಳು ಮಾಡಿದೆ. ಹೋಗಲಿ ಬಿಡು, ಆದರೆ ಎಲ್ಲ ಕಡೆ ಹೀಗೆ ಸಾಧುಸತ್ಪುರುಷರ ಅಮೂಲ್ಯ ಸಮಯವನ್ನು ನಿನ್ನ ಅಪವಿತ್ರ ಸಂಭಾಷಣೆಯಿಂದ ಹಾಳುಮಾಡಬೇಡ." ನಾರದರನ್ನು ರಕ್ಷಿಸಿದ್ದು ಯಾರು ಎಂದು ಶಿವನಿಗೆ ಚೆನ್ನಾಗಿ ಗೊತ್ತಿದ್ದುದರಿಂದ ಈ ಘಟನೆಯನ್ನು ಶ್ರೀಹರಿಯ ಎದುರಿಗೆ ಹೇಳಬೇಡ ಎಂದು ಒತ್ತಿ ಹೇಳಿದ್ದು. ಒಂದು ಕಗ್ಗತ್ತಲ ರಾತ್ರಿಯಲ್ಲಿ ನಿಮ್ಮನ್ನು ದಾರಿಯಲ್ಲಿ ಹೊಂಚು ಹಾಕುತ್ತಿದ್ದ ದರೋಡೆಕಾರರು ಎದುರಾದರು ಎಂದು ಕಲ್ಪಿಸಿಕೊಳ್ಳಿ. ನಿಗೂಢವಾಗಿ ಒಬ್ಬ ವ್ಯಕ್ತಿ ಬಂದು, ಅವರಿಗೆಲ್ಲ ಸರಿಯಾದ ಹೊಡೆತಕೊಟ್ಟು, ನಿಶ್ಶಬ್ದವಾಗಿ ಹೊರಟುಹೋಗುತ್ತಾನೆ. ಮಾರನೆಯ ದಿನ ನೀವು ಅದೇ ವ್ಯಕ್ತಿಯ ಬಳಿ ಹೋಗಿ, ಹೇಗೆ ಹಿಂದಿನ ರಾತ್ರಿ ವೀರಾವೇಶದಿಂದ ದರೋಡೆಕೋರರನ್ನು ಎದುರಿಸಿದೆ ಎಂದು ಕೊಚ್ಚಿಕೊಂಡರೆ, ಅದಕ್ಕಿಂತ ಮೂರ್ಖತನದ ಪರಮಾವಧಿ ಬೇರೆ ಇದೆಯೇ? ಶಿವನಿಗೆ ನಾರದರ ಮೇಲೆ ಅನುಕಂಪ ಇತ್ತು. ಈ ಘಟನೆಯನ್ನು ಶ್ರೀಹರಿಯ ಎದುರಿಗೆ ಹೇಳಬೇಡ ಎಂದು ಬುದ್ಧಿಹೇಳಿದ ಕಾರಣ, ನಾರದ ತನ್ನನ್ನು ತಾನೇ ಮೂರ್ಖನನ್ನಾಗಿ ಮಾಡಿಕೊಳ್ಳದಿರಲಿ ಎಂದು.

ಆದರೆ ಶಿವನ ಬುದ್ಧಿವಾದ ನಾರದರ ಕಿವಿಗೆ ಬೀಳಲಿಲ್ಲ. ನಾರದರು, ಶಿವನ ಉದ್ದೇಶವನ್ನೇ ಸಂಪೂರ್ಣ ತಪ್ಪಾಗಿ ಗ್ರಹಿಸಿದರು. ಶಿವನ ಮಾತುಗಳನ್ನು ಕೇಳಿದಾಗ, ಅವರು ತಮ್ಮೊಳಗೆ ತಾವೇ ನಕ್ಕರು. ಅವರು ಏನನ್ನು ನಿರೀಕ್ಷಿಸಿದ್ದರೋ ಅದು ಅಕ್ಷರಶಃ ನಿಜವೆಂದು ಸಾಬೀತವಾಯಿತು. ಮತ್ಸರದಿಂದ ಶಿವ ಹುಚ್ಚನಾಗಿಬಿಟ್ಟಿದ್ದಾನೆ. ಅಂದಿನಿಂದ ಯಾರೂ ಅವನನ್ನು ಪರಿಶುದ್ಧತೆ ಮತ್ತು ವಿರಕ್ತಿಗೆ ಆದರ್ಶಪ್ರಾಯ ಎಂದು ತಿಳಿಯುವುದಿಲ್ಲ. ಆದ್ದರಿಂದ ತನ್ನ ಕೀರ್ತಿಯನ್ನು ಉಳಿಸಿಕೊಳ್ಳಲು ನಾರದರ ವಿಜಯವನ್ನು ಅವನು ಗುಪ್ತವಾಗಿಡಲು ಬಯಸಿದ್ದು. ಆದರೆ ನಾರದರು ತಮ್ಮಲ್ಲಿ ತಾವೇ ಯೋಚಿಸಿದರು: "ಸಾಧ್ಯವೇ ಇಲ್ಲ! ಪ್ರಪಂಚಕ್ಕೆ ಸತ್ಯ ತಿಳಿಯಲೇಬೇಕು. ನಾನೇ ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠ. ನನಗೆ ಅಸೂಯಾಪರರು ಮತ್ತು ಸಂಶಯದ ಜನರೊಡನೆ ಸಹನೆಯಿಲ್ಲ."

ಈಗ ನಾರದರ ಅಹಂಕಾರ ಇನ್ನೂ ಅಧಿಕವಾಯಿತು. ತಾನು ಶಿವನಿಗಿಂತಲೂ ಅತ್ಯಂತ ಶ್ರೇಷ್ಠ ಎಂದು ಭಾವಿಸತೊಡಗಿದರು. ಶಿವನು ಕೋಪದಿಂದ ಮನ್ಮಥನನ್ನು ಸುಟ್ಟು ಭಸ್ಮ ಮಾಡಿದ. ಇದಕ್ಕೆ ವ್ಯತಿರಿಕ್ತವಾಗಿ ನಾರದರು ಮನ್ಮಥನಿಗೆ ಯಾವುದೇ ಶಿಕ್ಷೆಯನ್ನೂ ನೀಡದೆ ಕ್ಷಮಿಸಿದ್ದರು. ಮೇಲ್ನೋಟಕ್ಕೆ ನಾರದರ ಪ್ರತಿಕ್ರಿಯೆ ಶಿವನಿಗಿಂತ ಹೆಚ್ಚು ಉದಾತ್ತವಾದುದೂ ಶ್ಲಾಘನೀಯವಾದುದೂ ಆಗಿದೆ. ಶಿವ ತನ್ನ ಶಾಂತತೆಯನ್ನು ಕಳೆದುಕೊಂಡು ಉಗ್ರನಾದರೆ ನಾರದರು ಕ್ರೋಧವನ್ನು ಜಯಿಸಿ ಕ್ಷಮೆಯನ್ನು ತೋರುವ ವಿಶಾಲ ಹೃದಯಿಯಂತೆ ತೋರುತ್ತಾರೆ.

**■ ಒಂದೊಂದೇ ಆಸೆಯನ್ನು ಪ್ರತ್ಯೇಕವಾಗಿ ತೆಗೆದು ಎಸೆಯಲಾಗುವುದಿಲ್ಲ. ದಯಾದಾಕ್ಷಿಣ್ಯವಿಲ್ಲದೆ ಒಂದೇ ಹೊಡೆತಕ್ಕೇ ಎಲ್ಲವನ್ನೂ ನಿರ್ನಾಮ ಮಾಡಿಬಿಡಬೇಕು.**

*—ಸ್ವಾಮಿ ಯತೀಶ್ವರಾನಂದ.* ■

ಶ್ರೀರಾಮಕೃಷ್ಣರು ಕಾಮ ಮತ್ತು ಲೋಭಗಳ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಂಡವರಲ್ಲ. ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಮೊದಲಿನಿಂದ ಕೊನೆಯವರೆಗೆ ಕಾಮ-ಕಾಂಚನವನ್ನು ಮಾತ್ರ ಖಂಡಿಸುತ್ತಿದ್ದುದನ್ನು ಇಲ್ಲಿ ನೆನಪು ಮಾಡಿಕೊಳ್ಳುವುದು ಉಚಿತವೆನಿಸುತ್ತದೆ. ನಮ್ಮ ನಾಯಕ ನಾರದರು ಮಾಡಿದಂತೆ ಅವುಗಳನ್ನು ಕ್ಷಮಿಸುವುದಾಗಲೀ, ಅವುಗಳನ್ನು ಬದುಕಲು ಬಿಡುವುದಾಗಲೀ ಮಾಡದೆ, ನಿರ್ದಯವಾಗಿ ಕಾಮ-ಕಾಂಚನವನ್ನು ಸುಟ್ಟು ಬೂದಿ ಮಾಡಿದ್ದರು.

ಈಗ ವಿಷಯ ಸ್ವಲ್ಪ ಸ್ಪಷ್ಟವಾಗಿದೆ. ಆಧ್ಯಾತ್ಮಿಕ ಅನ್ವೇಷಕನಿಗೆ ಈ ಶತ್ರುಗಳು ಎದುರಾದಾಗ ಅವನು ಅವುಗಳನ್ನು ಕ್ಷಮಿಸಬೇಕೋ ಅಥವಾ ಅವುಗಳನ್ನು ಒಂದೇ ಬಾರಿ ಮುಗಿಸಿಬಿಡಬೇಕೋ? ನಾರದರ ವಿಷಯ ತೆಗೆದುಕೊಳ್ಳಿ. ಮನ್ಮಥನನ್ನು ಕ್ಷಮಿಸಿ, ತಾನೊಂದು ಅದ್ಭುತವಾದ ಕೆಲಸ ಮಾಡಿದೆ, ತಾನು ಕಾಮವನ್ನು ಮಾತ್ರವಲ್ಲ ಕ್ರೋಧವನ್ನೂ ಜಯಿಸಿದ್ದೇನೆ ಎಂದು ಕಲ್ಪಿಸಿಕೊಂಡರು. ಆದರೆ ಹೌದೇ? ಕಥೆ ಮುಂದುವರೆದಂತೆ ಕಾಮ ಮತ್ತು ಕ್ರೋಧ ಎರಡಕ್ಕೂ ಅವರು ಅಂತಿಮವಾಗಿ ಬಲಿಯಾಗುವುದು ಕಂಡುಬರುತ್ತದೆ. ಇದು ಅಲ್ಲದೆ, ಮನ್ಮಥನನ್ನು ಬಿಟ್ಟುಬಿಟ್ಟಿದ್ದಕ್ಕೆ ನಾರದರ ಸಮರ್ಥನೆ ಏನು? ನಾರದರನ್ನು ಮತ್ತೊಮ್ಮೆ ಕಾಡುವುದಿಲ್ಲ ಎಂದು ಅವನೇನಾದರೂ ಭಾಷೆ ಕೊಟ್ಟಿದ್ದನೇನು? ವಾಸ್ತವವಾಗಿ, ಯಾರನ್ನು ತಮ್ಮ ಉದಾರ ಹೃದಯದಿಂದ ಹೋಗಲು ಬಿಟ್ಟಿದ್ದರೋ ಅದೇ ಮನ್ಮಥನಿಂದ ಉಂಟಾದ ಕಾಮಜ್ವರದಿಂದ ಸದ್ಯದಲ್ಲೇ ಅವರು ದುರ್ಭರವಾಗಿ ಬಾಧಿಸಲ್ಪಡುತ್ತಾರೆ. ಆಧ್ಯಾತ್ಮಿಕ ಜೀವನದ ಶತ್ರುಗಳಾದ ಕಾಮ ಮತ್ತು ಲೋಭ ಮುಂತಾದುವುಗಳ ಜೊತೆ ವರ್ತಿಸುವಾಗ ಆಧ್ಯಾತ್ಮಿಕ ಸಾಧಕನು ದಯೆ, ತಾಳ್ಮೆ, ಸಹೃದಯತೆಯನ್ನು ತೋರಬಾರದು. ನಾರದರ ಕ್ಷಮೆಯ ಮಾರ್ಗ ತಪ್ಪಾಗಿತ್ತು. ಸರಿಯಾಗಿ ಹೇಳುವುದಾದರೆ, ಅದು ಕರುಣೆಯೇ ಅಲ್ಲ. ಇಡೀ ವಿಶ್ವಕ್ಕೇ ತಾನೊಬ್ಬ ಶ್ರೇಷ್ಠ ದಯಾಳು, ಕ್ಷಮಾಶೀಲ, ಸಂಪೂರ್ಣ ಕ್ರೋಧವನ್ನು ನಿಗ್ರಹಿಸಿದವನು ಎನ್ನುವುದು ತಿಳಿಯಬೇಕೆನ್ನುವುದೇ ಅವರ ಸುಪ್ತವಾದ ಆಸೆ. ನಾರದರ ಅಹಂಕಾರದಿಂದ ತೀವ್ರಗೊಳಿಸಲ್ಪಟ್ಟ ವೈಯಕ್ತಿಕವಾದ ಆ ಆಸೆ, ಪ್ರತಿಕ್ಷಣ ಕಳೆದಂತೆ ಅಪಾಯಕರ ಪ್ರಮಾಣವನ್ನು ಪಡೆದುಕೊಳ್ಳುತ್ತಿದೆ.

ಶಿವನಿಂದ ಬೀಳ್ಕೊಂಡ ನಾರದರು ನೇರ ವೈಕುಂಠದ ಕಡೆಗೆ ಹೊರಟರು. ಅವರ ವಿಜಯದ ವಿಷಯವನ್ನು ಶ್ರೀಹರಿಗೆ ಹೇಳಬೇಡವೆಂದು ಅಸೂಯಾಪರನಾದ ಶಿವ ಹೇಳಿರಲಿಲ್ಲವೇ? ನಾರದರು ಈಗ ಅದನ್ನೇ ಮಾಡುವುದು! "ವಿನಾಶಕಾಲೇ ವಿಪರೀತ ಬುದ್ಧಿಃ" ಎಂದು ಒಂದು ಗಾದೆಯ ಮಾತಿದೆ. ಅಂತಹ ಸಮಯ

ನಾರದರ ಜೀವನದಲ್ಲಿ ಬಂದಂತಿದೆ. ಭಕ್ತಿಯ ಉನ್ನತ ಶಿಖರದಲ್ಲಿ ಇರುತ್ತಿದ್ದವರು ಈಗ ವೇಗವಾಗಿ ಕೆಳಗೆ ಜಾರುತ್ತಿದ್ದಾರೆ. ವಿಪರ್ಯಾಸವೆಂದರೆ ಹೆಚ್ಚು ಹೆಚ್ಚು ಕೆಳಗೆ ಬಂದಂತೆಲ್ಲಾ, ಇನ್ನೂ ಮೇಲಕ್ಕೆ ಏರುತ್ತಿರುವ ಅನುಭವವಾಯಿತು. ಅವರು ಕೊಟ್ಟಕೊನೆಗೆ ವೈಕುಂಠದಲ್ಲಿ ಶ್ರೀಹರಿಯ ಎದುರಿಗೆ ನಿಂತಾಗ, ತನಗೆ ಯಾರೂ ಸರಿಸಮಾನರೇ ಇಲ್ಲ—ಸ್ವತಃ ಶ್ರೀಹರಿ ಸಹ ಅಲ್ಲ! ಎಂಬ ನಿರ್ಧಾರಕ್ಕೆ ಬಂದರು. ಶ್ರೀಹರಿಯ ವಸ್ತ್ರಾಭರಣಗಳು ಅವನ ಸುಖೋಪಭೋಗವನ್ನು ತೃಪ್ತಿಪಡಿಸುವ ಸಾಧನಗಳಾಗಿಯೂ ಮತ್ತು ಪ್ರಭುವಿನ ಪ್ರತಿಷ್ಠೆ ಮತ್ತು ಒಣ ಜಂಭವನ್ನು ತೋರಿಸುವ ಚಿಹ್ನೆಗಳಾಗಿಯೂ ತೋರಿದುವು. ಶ್ರೀಹರಿ ಸರ್ಪದ ಮೇಲೆ ಒರಗಿಕೊಂಡಿರುವುದು ಅವನ ಜಡತೆ ಮತ್ತು ಆಲಸ್ಯದಿಂದ ಎಂದು ನಾರದರು ನಿರ್ಧರಿಸಿದರು. ಎಲ್ಲದಕ್ಕಿಂತ, ಅವನ ಅಪ್ರತಿಮ ಸುಂದರ ಸಂಗಾತಿಯಾದ ಶ್ರೀಲಕ್ಷ್ಮಿ ಯಾವಾಗಲೂ ಅವನ ಸೇವೆ ಮಾಡಲು ಬಳಿ ಇರುವುದನ್ನು ನೋಡಿದಾಗ, ಶ್ರೀಹರಿ ಸಹ ಸಂಪೂರ್ಣ ಕಾಮದಿಂದ ಮುಕ್ತನಾಗಿಲ್ಲ ಎಂದು ನಾರದರಿಗೆ ಸಂಶಯವಾಯಿತು.

ಅಹಂಭಾವ ಘೋರವಾದ ಅವಿವೇಕತನಕ್ಕೆ ಎಡೆಮಾಡಿಕೊಡುತ್ತದೆ. ಯಾರನ್ನು ತಾನು ಸರ್ವಕಾಲದಲ್ಲೂ ಧ್ಯಾನ ಮಾಡುತ್ತಿದ್ದನೋ, ಯಾರ ಶ್ರೀನಾಮವನ್ನು ನಿರಂತರ ಸ್ಮರಣೆ ಮಾಡುತ್ತಿದ್ದನೋ, ಯಾರ ಅನಂತ ಕೃಪೆ ತನ್ನನ್ನು ಎಲ್ಲೆಲ್ಲೂ ಮತ್ತು ಎಲ್ಲ ಕಾಲದಲ್ಲೂ ಯಾವಾಗಲೂ ರಕ್ಷಿಸುತ್ತಿತ್ತೋ, ಆ ಭಗವಂತನೇ ತನ್ನ ಎದುರಿಗೆ ಇರುವುದು ಎಂಬ ವಾಸ್ತವಾಂಶ ನಾರದರ ದೃಷ್ಟಿಗೆ ಪೂರ್ಣವಾಗಿ ಮರೆಯಾಯಿತು. ಮನೆಯೊಳಗೆ ಹಾವು ಇರಬಹುದೆಂಬ ಕಲ್ಪನೆಯೇ ನಮ್ಮನ್ನು ಭಯ ಭೀತರನ್ನಾಗಿ ಮಾಡುವುದು. ಇಲ್ಲಿ ಶ್ರೀಹರಿ, ಸಹಸ್ರಹೆಡೆಯ ಆದಿಶೇಷನ ಮೇಲೆ ಶಾಂತವಾಗಿ ನೆಮ್ಮದಿಯಿಂದ ಮಲಗಿದ್ದಾನೆ. ನಮ್ಮ ಗ್ರಂಥಗಳಲ್ಲಿ ಆ ಸರ್ಪ ಅನಂತನನ್ನು ಕಾಲದ ಪ್ರತೀಕ ಎಂದು ಬಣ್ಣಿಸಲಾಗಿದೆ. ಭಗವಂತ ಸರ್ಪದ ಮೇಲೆ ಮಲಗಿರುವುದು ಕಾಲದ ನಿರ್ಬಂಧವನ್ನು ಮೀರಿದ, ಭಗವಂತನ ಅನುಭವಾತೀತ ಸ್ವರೂಪವನ್ನು ನೆನಪು ಮಾಡುವುದು. ಕ್ಷೀರಸಾಗರದಿಂದ ಶ್ರೀಲಕ್ಷ್ಮಿಯ ಉದ್ಭವವಾದಾಗ ಅವಳನ್ನು ಪಡೆಯಲು ವಾಸ್ತವವಾಗಿ ಹೋರಾಟವೇ ನಡೆಯಿತು. ಸಮುದ್ರವನ್ನು ಮಥಿಸುತ್ತಿದ್ದ ದೇವ-ದಾನವರಲ್ಲಿ, ಗುಣ ಅವಗುಣಗಳೆರಡೂ ಇದ್ದುದನ್ನು ಶ್ರೀಲಕ್ಷ್ಮಿ ನೋಡಿದಳು. ಕೇವಲ ಶ್ರೀಹರಿ ಮಾತ್ರ ಯಾವುದೇ ದೋಷಗಳಿಲ್ಲದೆ ಬರೀ ಸದ್ಗುಣಗಳಿಂದ ಕೂಡಿದವನಾಗಿದ್ದ. ಅದಕ್ಕಿಂತ ಮಿಗಿಲಾಗಿ, ಅಲ್ಲಿದ್ದ ಪ್ರತಿಯೊಬ್ಬರ ಹೃದಯದಲ್ಲೂ ಆಸೆಯೆಂಬ ಜ್ವಾಲೆ ಉರಿಯುತ್ತಿರುವುದನ್ನು ನೋಡಿದಳು. ಮತ್ತೆ ಅದಕ್ಕಿದ್ದ ಒಂದೇ ಒಂದು ಅಪವಾದವೆಂದರೆ ಶ್ರೀಹರಿ, ಅವನು ಆಸೆಗಳಿಂದ ಸಂಪೂರ್ಣ ಮುಕ್ತನಾಗಿದ್ದ. ಲಕ್ಷ್ಮಿ ತನ್ನನ್ನು ಅವನಿಗೆ ಅರ್ಪಿಸಿಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ನಾರದರಿಗೆ ಇವೆಲ್ಲ ಗೊತ್ತು. ಆದರೆ ಮೊದಲೇ ಹೇಳಿದಂತೆ ಅಹಂಭಾವದ ಲಕ್ಷಣವೇ ಮೂಢತನ. ಅದು ನಿಮ್ಮ ಯೋಚನೆಯ ದಿಕ್ಕನ್ನೇ ಸಂಪೂರ್ಣ ಬದಲಿಸುತ್ತದೆ. ಹಾಗಾಗಿ, ನಾರದರು ಶ್ರೀಹರಿಯನ್ನು ನೋಡಿದಾಗ ಅತ್ಯಂತ ದುರದೃಷ್ಟಕರ ತೀರ್ಮಾನಕ್ಕೆ ಬಂದರು.

ಭಗವಂತ ನಾರದರನ್ನು ಸ್ವಾಗತಿಸಲು ಎದ್ದು ನಿಂತು ವಿನಯಪೂರ್ವಕವಾಗಿ ಹೇಳಿದ: "ಪೂಜ್ಯ ಋಷಿವರ್ಯರು ಬಹಳ ಕಾಲದ ನಂತರ ಭೇಟಿಕೊಡುತ್ತಿದ್ದೀರಿ." ಸಾಧಾರಣ ಸನ್ನಿವೇಶದಲ್ಲಾಗಿದ್ದರೆ ಹರಿಯ ಔಪಚಾರಿಕ ಮಾತು ನಾರದರಿಗೆ ದಿಗ್ಭ್ರಮೆ ಹುಟ್ಟಿಸುತ್ತಿತ್ತು. ಏಕೆಂದರೆ ಅವರಿಬ್ಬರ ಬಾಂಧವ್ಯ ಅನೌಪಚಾರಿಕವಾದುದಾಗಿತ್ತು ಮತ್ತು ಶ್ರೀಹರಿ ನಾರದರನ್ನು ತನ್ನ ಸ್ವಂತ ಮಗುವಿನಂತೆ ಪ್ರೀತಿಸುತ್ತಿದ್ದ. ಆದರೆ ಈ ದಿನ ಅವನ 'ಮಗು' ಈ ಬದಲಾವಣೆಯನ್ನು ಗಮನಿಸದಷ್ಟು ಅಮಲಿನಲ್ಲಿತ್ತು. ಶ್ರೀಹರಿ ತನ್ನನ್ನು ಅಷ್ಟೊಂದು ಗೌರವದಿಂದ ಮಾತನಾಡಿಸುವುದು ಸಹಜವಾಗಿಯೇ ಇದೆ ಎಂದು ತಮ್ಮಲ್ಲೇ ಭಾವಿಸಿದರು. ಅದೂ ಅಲ್ಲದೆ, ತನ್ನಂಥ ಪ್ರಮುಖ ಮತ್ತು ಪ್ರಖ್ಯಾತ ವ್ಯಕ್ತಿ ಪದೇ ಪದೇ ಭೇಟಿಕೊಡುವುದು ತನ್ನ ಘನತೆಗೆ ತಕ್ಕುದಲ್ಲ ಎಂದು ನಾರದರಿಗೆ ಅನ್ನಿಸಿರಬಹುದು. ಪ್ರತಿದಿನ ವೈಕುಂಠಕ್ಕೆ ಹೋಗುವುದನ್ನು ಎಂದೂ ತಪ್ಪಿಸದೇ ಇದ್ದವರು, ಈಗ ಅನೇಕ ದಿನಗಳ ನಂತರ ಹೋಗುತ್ತಿದ್ದಾರೆ. ಕಾರಣಗಳೇನೇ ಇರಲಿ, ತಾನು ಇಷ್ಟೊಂದು ಕಾಲದ ನಂತರ ಭೇಟಿಕೊಡುತ್ತಿರುವುದೇಕೆ ಮತ್ತು ಯಾವ ಕಾರಣಕ್ಕಾಗಿ ಎಂದು ಹೇಳುವುದಕ್ಕೆ ನಾರದರು ಈ ಅವಕಾಶವನ್ನು ಉಪಯೋಗಿಸಿಕೊಂಡರು. ಕಾಮ ಮತ್ತು ಕ್ರೋಧವನ್ನು ತಾನು ಜಯಿಸಿದ ಕಥೆಯನ್ನು ವಿವರಿಸಿ, ಶ್ರೀಹರಿಗೂ ಶಿವನಂತೆಯೇ ಅಸೂಯೆಯಾಗಬಹುದೆಂದು ಊಹಿಸಿಕೊಳ್ಳುತ್ತಾ, ಶ್ರೀಹರಿಯೆಡೆಗೆ ನಿರೀಕ್ಷೆಯಿಂದ ನೋಡಿದರು.

ಶ್ರೀಹರಿ ಗಂಭೀರವಾಗಿ ಹೇಳಿದ, "ಓ ನಾರದ, ಬರೀ ನಿನ್ನ ದರ್ಶನ ಮಾತ್ರದಿಂದಲೇ ಸಾಮಾನ್ಯ ಜನರು ಕಾಮ ಮತ್ತು ಇನ್ನಿತರ ನ್ಯೂನತೆಗಳಿಂದ ಮುಕ್ತರಾಗುತ್ತಾರೆ. ಇನ್ನು ನೀನು ಅಂತಹ ದೋಷಗಳಿಂದ ಮುಕ್ತ ಎನ್ನುವುದರಲ್ಲಿ ಆಶ್ಚರ್ಯವೇನಿದೆ?" ಹರ್ಷದಿಂದ ಉಬ್ಬಿದ ನಾರದರು ಉತ್ತರಿಸಿದರು, "ಪ್ರಭೂ, ಎಲ್ಲ ನಿನ್ನ ಕೃಪೆಯಿಂದ" ಎಂದು. ಶ್ರೀಹರಿ ಅಷ್ಟೊಂದು ಶ್ಲಾಘಿಸುತ್ತಿರುವಾಗ, ಸಂದರ್ಭಕ್ಕೆ ತಕ್ಕಂತೆ ತಾನೂ ಏನಾದರೂ ಹೇಳಬೇಕೆಂದು ನಾರದರಿಗನ್ನಿಸಿತು. ತನ್ನ ಯಶಸ್ಸು ಭಗವಂತನ ಕೃಪೆಯಿಂದ ಎಂದು ಹೇಳಿದ್ದು ಕೇವಲ ಶಿಷ್ಟಾಚಾರಕ್ಕಾಗಿ, ಒಳಗೊಳಗೆ ಆ ಜಯ ತನ್ನ ವೈಯಕ್ತಿಕ ಸಾಧನೆ ಎಂದು ಇನ್ನೂ ದೃಢವಾಗಿ ಮನವರಿಕೆ ಮಾಡಿಕೊಂಡರು.

■ ಪ್ರಶಂಸೆಯ ನುಡಿಗಳು ನಿನಗೆ ಸಂತೃಪ್ತಿಯ ಲೋಲುಪತೆಯನ್ನು ನೀಡದಿರಲಿ. ಇದರಿಂದ ನಿನಗೆ ಆಧ್ಯಾತ್ಮಿಕ ಹಾನಿಯುಂಟಾಗುತ್ತದೆ. ಇಂಥ ಪ್ರಶಂಸೆಗೆ ಆಂತರಿಕ ವಿರೋಧವಿರಬೇಕು. —ಸಂತ ಫ್ರಾನ್ಸಿಸ್ ■

ಈ ಸಂಗತಿ ನಮಗೆ ಪರಿಚಿತವಾದುದೇ ಆಗಿದೆ. "ಭಗವಂತನ ಕೃಪೆಯಿಂದ", "ತಾಯಿಯ ಕೃಪೆಯಿಂದ", "ಗುರು ಕೃಪೆಯಿಂದ" ಎಂದು ಜನರು ಉಪಯೋಗಿಸುವುದನ್ನು ನೋಡಿದಾಗ, ಈ ಆಧುನಿಕ ಯುಗದಲ್ಲಿ ಕೃಪೆ ಅಷ್ಟೊಂದು ಸುಲಭವಾಗಿ ಮತ್ತು

ಧಾರಾಳವಾಗಿ ಸಿಗುವಂಥ ವಸ್ತುವಾಗಿದೆಯೇನು ಎಂದು ಆಶ್ಚರ್ಯ ಪಡುವಂತಾಗುತ್ತದೆ. ನಿಜಸ್ಥಿತಿ ಏನೆಂದರೆ ಅತಿಯಾದ ಮತ್ತು ತಪ್ಪು ಬಳಕೆಯಿಂದ ಆ ಪದ ತನ್ನ ಪವಿತ್ರತೆ ಮತ್ತು ನಿಜವಾದ ಅರ್ಥವನ್ನು ಕಳೆದುಕೊಂಡಿದೆ. ನಮ್ಮ ಜೀವನದೋಣಿ ಸುಗಮವಾಗಿ ಸಾಗುತ್ತಿರುವಾಗ ಭಗವಂತನ ಕೃಪೆಯ ಬಗ್ಗೆ ನಿರರ್ಗಳವಾಗಿ ಮಾತನಾಡುವುದು ಸುಲಭ. ನಮ್ಮ ಜೀವನದಲ್ಲಿ ಕಷ್ಟಗಳು ಎದುರಾದಾಗ, ಸಮುದ್ರ ಅಲ್ಲೋಲ ಕಲ್ಲೋಲವಾಗಿ, ಬಿರುಗಾಳಿ ಬೀಸುತ್ತಿರುವಾಗ ಅದೂ ಭಗವಂತನ ಕೃಪೆ ಕೆಲಸಮಾಡುವ ಒಂದು ರೀತಿ ಎಂದು ಎಷ್ಟು ಮಂದಿ ಯೋಚಿಸಲು ಸಾಧ್ಯ? ನಾರದರ, "ಪ್ರಭೂ, ಎಲ್ಲ ನಿನ್ನ ಕೃಪೆಯಿಂದ", ಎಂಬ ಹೇಳಿಕೆ ಹೃದಯದಿಂದ ಬಂದುದಾಗಿರಲಿಲ್ಲ. ಕೇವಲ ತುಟಿಯಿಂದ ಬಂದದ್ದಾಗಿತ್ತು.

ನಾರದರು ಶ್ರೀಹರಿಯ ಕಠಿಣ ಮುಖಭಾವವನ್ನು ಸ್ವಲ್ಪವಾದರೂ ಗಮನಿಸಿದ್ದರೆ, ಶ್ರೀಹರಿಯ ಹೊಗಳಿಕೆಯನ್ನು ಯಾವ ರೀತಿ ತೆಗೆದುಕೊಳ್ಳಬೇಕು ಎನ್ನುವುದು ಅರ್ಥವಾಗುತ್ತಿತ್ತೇನೋ. ಆದರೆ ನಿಜಸ್ಥಿತಿಗೆ ಕುರುಡಾಗಿ ತನಗೆ ಅನುಕೂಲಕರವಾಗಿರುವುದನ್ನು ಮಾತ್ರ ತೆಗೆದುಕೊಳ್ಳುವುದು ಅಹಂಭಾವದ ಗುಣ. ಶ್ರೀಹರಿಯ ಹೊಗಳಿಕೆಯ ಮಾತನ್ನು ಅತಿ ಆಸೆಯಿಂದ ಕಬಳಿಸುವುದರಲ್ಲಿ ನಿರತರಾಗಿದ್ದ ನಾರದರ ಗಮನ ಶ್ರೀಹರಿಯ ಕಠಿಣ ಮುಖಭಾವವನ್ನು ಗಮನಿಸಲೇ ಇಲ್ಲ. ಪ್ರಶಂಸೆ, ಗೌರವಕ್ಕಾಗಿ ಪಡುವ ಆಸೆ, ವಿಚಿತ್ರ ರೀತಿಯ ಆಸೆ. ಹೊಟ್ಟೆಯ ಹಸಿವನ್ನು ಆಹಾರದಿಂದ ನೀಗಿಸಬಹುದು. ಆಹಾರವನ್ನು ತಿಂದಂತೆ ಈ ಹಸಿವು ಕಡಮೆಯಾಗುತ್ತಾ ಹೋಗುತ್ತದೆ. ಅದಕ್ಕೆ ಬದಲಾಗಿ, ಜನರು ಅವರ ಸಾಧನೆಗಳನ್ನು ಶ್ಲಾಘಿಸಿದಂತೆಲ್ಲಾ, ಪ್ರಶಂಸೆ-ಗೌರವದ ಬಯಕೆ ಮತ್ತೂ ಮತ್ತೂ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ ಶ್ರೀಹರಿಯ ಅಭಿನಂದನೆಯನ್ನು ದುರಾಸೆಯಿಂದ ಕಬಳಿಸಿದ ನಾರದರು ಅಂತಹ ಕೊನೆಯಿಲ್ಲದ ಬಯಕೆಯಿಂದ ಬಾಧಿಸಲ್ಪಡುತ್ತಿದ್ದಾರೆ. ತನಗೆ ಸರಿಸಮಾನರು ಯಾರೂ ಇಲ್ಲವೆಂಬುದು ಗುರುತಿಸಲ್ಪಟ್ಟೊಡನೆ, ಸಂಪೂರ್ಣ ತೃಪ್ತರಾಗಿ, ನಾರದರು ವೈಕುಂಠದಿಂದ ಹೊರಟರು. ತನ್ನ ಪ್ರೀತಿಯ ಮಗುವಿನ ಸ್ಥಿತಿಯನ್ನು ನೋಡಿ ಭಗವಂತನಿಗೇ ದುಃಖವಾಯಿತು.

ಅನೇಕ ಆಧ್ಯಾತ್ಮಿಕ ಸಾಧಕರಲ್ಲಿ ಆಗುವುದೂ ಹೀಗೆ. ತಮ್ಮ ಸುತ್ತಲಿನವರ ದೃಷ್ಟಿಯಿಂದ ಅವರು ಸರಿಯಾಗೇ ಮುಂದುವರೆಯುತ್ತಿರುವಂತೆ ತೋರಿಬರುತ್ತದೆ. ಕೆಟ್ಟದ್ದು ಮಾಡಲು ಅವಕಾಶ ಸಿಗುವವರೆಗೆ ಅನೇಕ ಮಂದಿ ಒಳ್ಳೆಯವರಾಗೇ ಇರುತ್ತಾರೆ. ಅಸತ್ಯವನ್ನು ಹೇಳುವುದರಿಂದ ಲಾಭವಾಗುವುದಿದ್ದರೂ, ಅದು ಯಾರಿಗೂ ತಿಳಿಯುವ ಅಪಾಯವಿಲ್ಲದಿದ್ದರೂ, ಅದನ್ನು ತಿರಸ್ಕರಿಸಿ ಸತ್ಯವಂತನಾಗಿ ಉಳಿದಾಗ ಮಾತ್ರ ನಿಮ್ಮ ಸತ್ಯಸಂಧತೆ ಒಂದು ಸದ್ಗುಣವಾಗುವುದು. ಪರೀಕ್ಷಾಸಮಯದಲ್ಲಿ ಪವಿತ್ರತೆಯನ್ನು ಕಾಪಾಡಿಕೊಂಡಾಗ ಮಾತ್ರ ನಿಮ್ಮ ಪರಿಶುದ್ಧತೆ ಒಂದು ಸದ್ಗುಣವಾಗುವುದು. ಕೆಲವೊಂದು ಸಂದರ್ಭಗಳಲ್ಲಿ ಸಿಟ್ಟು ಮಾಡಿಕೊಳ್ಳುವುದು ನ್ಯಾಯವಾಗಿಯೇ ಇದ್ದರೂ, ಹೊರಗಡೆ ಮಾತ್ರವಲ್ಲ ಆಂತರ್ಯದಲ್ಲೂ ಕೂಡ ಕೋಪಗೊಳ್ಳದಿದ್ದರೆ, ಕ್ರೋಧದ ಮೇಲೆ ನಿಮ್ಮ ಹಿಡಿತ ಪರಿಪೂರ್ಣವಾಗಿದೆ ಎಂದು ಹೇಳಬಹುದು.

ನಾರದರು ಈ ಮೇಲಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲಿಲ್ಲ. ಕ್ಷಣಿಕ ಯಶಸ್ಸನ್ನು ಶಾಶ್ವತವಾದ ಗೆಲುವು ಎಂದು ತಪ್ಪಾಗಿ ಗ್ರಹಿಸಿದ್ದರು. ಸಮಸ್ಯೆಯ ಅರಿವು ಭಗವಂತನಿಗಿತ್ತು. ನಾರದರನ್ನು ಸರಿದಾರಿಯಲ್ಲಿ ತರಲು ಏನಾದರೂ ಮಾಡಲು ಅವನು ನಿರ್ಧರಿಸಿದ. ನೀವು ಕೇಳಬಹುದು : "ನೀನು ತಪ್ಪುದಾರಿ ಹಿಡಿದಿದ್ದೀಯ ಎಂದು ಭಗವಂತ ನಾರದರಿಗೆ ನೇರವಾಗಿ, ಆಗಿಂದಾಗಲೇ ಹೇಳಿ ಅವರನ್ನು ಸರಿಪಡಿಸಬಹುದಿತ್ತಲ್ಲ? ಅದರ ಬದಲು, ನಾರದರನ್ನು ಪ್ರಶಂಸಿಸಿ, ಅವರ ಅಹಂ ವೃದ್ಧಿಗೊಳ್ಳುವಂತೆ ಮಾಡಿ, ಅವರ ಆಂತರ್ಯದ ಖಾಯಿಲೆ ಇನ್ನೂ ಉಲ್ಬಣಗೊಳ್ಳುವಂತೆ ಮಾಡಿದ್ದೇಕೆ?"

ಪ್ರತಿವ್ಯಕ್ತಿಯೂ ತನ್ನದೇ ಪ್ರಯತ್ನದಿಂದ ವಿಕಾಸಹೊಂದಲು ಮತ್ತು ತನ್ನ ಕರ್ಮದ ಫಲವನ್ನು ತಾನೇ ಎದುರಿಸಲೂ ಭಗವಂತನು ಅವಕಾಶ ಕೊಡುತ್ತಾನೆ. ಯಾವಾಗ ದೈವೀ ಸಹಾಯದ ಆವಶ್ಯಕತೆ ಉಂಟಾಗುತ್ತದೋ ಆಗ ಭಗವಂತ ಪ್ರವೇಶಿಸುತ್ತಾನೆ. ನಾರದರ ಜೀವನದಲ್ಲಿ ಅಂತಹ ಸಮಯ ಈಗ ಬಂದಿದೆ. ನಾರದರನ್ನು ಯಾರೂ ಎಚ್ಚರಿಸಲಿಲ್ಲವೆಂದೇನೂ ಅಲ್ಲ. ನಾವು ನೋಡಿದಂತೆ ಅವರ ಹೃದಯವಿಕಾರದ ಬಗ್ಗೆ ಸಾಕಷ್ಟು ಸೂಚ್ಯವಾಗಿ ತಿಳಿಸಿ, ಶಿವ ಅವರಿಗೆ ಸಹಾಯ ಮಾಡಲು ಪ್ರಯತ್ನಿಸಿದ. ಶಿವನ ಸೂಕ್ಷ್ಮವಾದ ಬುದ್ಧಿವಾದವನ್ನು ಅರ್ಥಮಾಡಿಕೊಳ್ಳುವ ನಾರದರ ಸಾಮರ್ಥ್ಯಕ್ಕೇ ಅಹಂಕಾರ ತಡೆಯುಂಟುಮಾಡಿತ್ತು. ಈಗ ಭಗವಂತ ವಿಷಯವನ್ನು ತಾನೇ ಸ್ವತಃ ಕೈಗೆತ್ತಿಕೊಂಡನು.

ತನ್ನ ಅರಿವಿಲ್ಲದೆಯೇ ಆಧ್ಯಾತ್ಮಿಕ ಅವನತಿಯ ಭೀಕರವಾದ ಆಳಕ್ಕೆ ಬಿದ್ದ ನಾರದರನ್ನು ಶ್ರೀಹರಿ ಪಾರುಮಾಡಿದ ಬಗೆ ಹೇಗೆ? ಇದು ಈ ಮನೋಹರವಾದ ಕಥೆಯ ಮುಂದಿನ ಪ್ರಕರಣವಾಗುತ್ತದೆ ಮತ್ತು ಆಧ್ಯಾತ್ಮಿಕ ಜೀವನದ ಇನ್ನೂ ಹಲವು ಸತ್ಯಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಇದು ನಮ್ಮ ಮುಂದಿನ ತಿಂಗಳ ಚರ್ಚೆಯ ವಿಷಯವಾಗಿರುತ್ತದೆ.(ಮುಂದುವರಿಯುತ್ತದೆ.)

◆

ಶಿಷ್ಯನೊಬ್ಬನು ಗುರುವಿನ ಸಮೀಪ ಹೋಗುತ್ತಾನೆ. ಗುರುವಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿ ಕೇಳುತ್ತಾನೆ :

"ನಾನು ಮುಕ್ತಿಯನ್ನು ಬಯಸುತ್ತೇನೆ."

ಗುರು ಮುಗುಳ್ನಗುತ್ತಾ ಹೇಳಿದ :

"ನಿನ್ನಲ್ಲಿ 'ನಾನು' ಇದೆ, ಬಯಕೆಯೂ ಇದೆ. ಹಾಗಿರುವಾಗ ನೀನು ಮುಕ್ತಿಗೆ ಹೇಗೆ ಅರ್ಹನಾಗಬಲ್ಲೆ!?"